ಕವಿತೆ




## ಗೀತಾ ವಸಂತ

ಕಲೆ: ಎಸ್.ವಿ. ಹೂಗಾರ್




# ಹಂಸರಾಗ

ಎಷ್ಟು ಯುಗವಾದವು
ಒಂದು ವಿಷಾದ ರಾಗಕ್ಕೆ
ಕೊರಳು ಕೊಟ್ಟು..
ಹೋಗುತ್ತ ಕೊಯ್ಯುವುದು ಬರುತ್ತ ಕೊಯ್ಯುವುದು
ವಯಲಿನ್ ಮೀಟುಗೋಲಂತೆ
ಒಮ್ಮೊಮ್ಮೆ ಗರಗಸದಂತೆ...

ಹೊಕ್ಕಳ ತಿದಿಯೊತ್ತಿ
ಸ್ವರ ಹೊಮ್ಮಿಸಲು ಬಾಯ್ದೆರೆದರೆ
ನೋವಿನ ಪಸೆಯಂಟಿದ ನಾಲಗೆ
ಮೌನವಾಗುವುದು
ರಾಗವೊಂದು ಅಲ್ಲೆ ತಣ್ಣಗಾಗುವುದು.
ನಾದ ನದಿಯಲ್ಲಿ
ಹಾಯಾಗಿ ತೇಲುವ ಪ್ರಾಣ ಹಂಸವೇ
ಹಾಡುವ ತ್ರಾಣಕೊಡು ನನಗೆ.

ರಾಗ ಹುಟ್ಟುವ ಮೊದಲ
ಅಗಾಧ ಮೌನ
ಪ್ರಳಯಕ್ಕೂ ಮುಂಚಿನ
ಅಗೋಚರ ಕ್ಷೋಭೆ
ಎಲ್ಲವೂ ಹಾಡಾಗುವುದೆಂತು?
ಎಲ್ಲರೂ ರಾಗವ ಚಪ್ಪರಿಸಿ
ಅಪ್ಪಳಿಸುವ ಚಪ್ಪಾಳೆ ಸದ್ದು
ಕೇಳಿಸಿತೇ ನಿನಗೆ ಹಂಸ?
ಕೊನೆಗೂ ಹಾಡು ಮಾತ್ರ ಒಂಟಿ.

ಪ್ರಳಯ ಸೃಷ್ಟಿಯ ಚಕ್ರಕ್ಕೆ
ಸಿಕ್ಕಿಕೊಳ್ಳುವ ಮೊದಲು
ಈ ನಾದ ನದಿಯೊಂದೇ ಇತ್ತು
ಅಲ್ಲಿ ನೀನು ಹುಟ್ಟುವುದ ನಾ ನೋಡಿದೆ
ನಾ ಹುಟ್ಟುವುದ ನೀನು.

ಒಳಗೊಂದು ಕೊಳವುಂಟು
ಅಲ್ಲಿಣುಕುವುದು ಚಂದ್ರಬಿಂಬ
ಅಂಕುಡೊಂಕಾಗಿ...
ಪ್ರಾಣ ಮೆಲ್ಲಗೆ ಸಂಚರಿಸುವುದು
ಜೋಡಿ ಅಂಚೆಗಳೊಳಗೆ
ಹಂssಸ, ಸಂssಹ, ಹಂಸ...

ಆದಲು ಬದಲಾಗುವ ಉಸಿರು
ಒಂದರೊಳಗೊಂದು ಬೆರೆತ ಕೊರಳು
ಕೊಳದ ತುಂಬಾ ಬೆಳುದಿಂಗಳ
ಅಲೆಯಂತೆ ಹರಡುವ ಹಾಡು
ಇದು ಎಂದೂ ಮುಗಿಯದ
ಆದಿಮ ಬೆಡಗು.